**ಅತೀ ತುರ್ತು**

**ಕರ್ನಾಟಕ ಸರ್ಕಾರ**

**ಸಂಖ್ಯೆ: ಡಿಟಿಇ 06 ಡಿವಿಪಿ (1) 2019**

**ನಿರ್ದೇಶಕರವರ ಕಛೇರಿ,**
**ತಾಂತ್ರಿಕ ಶಿಕ್ಷಣ ಇಲಾಖೆ,**
**ಬೆಂಗಳೂರು 560 001.**
**ದಿನಾಂಕ: 10-04-2019.**

**ಸುತ್ತೋಲೆ**

**ವಿಷಯ:** ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ಅಧಿನಿಯಮ 2014 ರನ್ನು ಜಾರಿಗೊಳಸುವ ಬಗ್ಗೆ

**ಉಲ್ಲೇಖ:**
1. ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 60 ಶಾಸನ 2013, ದಿನಾಂಕ 12-02-2014
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ 4 ಜಿಆರ್‌ಟಿ(2) 2014, ದಿನಾಂಕ 05-09-2014
3. ಈ ಕಛೇರಿ ಪತ್ರ ಸಂಖ್ಯೆ: ಡಿಟಿಇ 06 ಡಿವಿಪಿ(1) 2015, ದಿನಾಂಕ 07-05-2015, 08-06-2015, 07-07-2015

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರನ್ವಯ ದಿನಾಂಕ 12-02-2014 ರಿಂದ ಜಾರಿಗೆ ಬಂದಿರುವ ಅಧಿಸೂಚನೆಯನ್ವಯ ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನವನ್ನು ಆಯಾ ಹುದ್ದೆಗಳಗೆ ಸರ್ಕಾರವು ಅನುಮೋದನೆ ನೀಡಿ ಸಹಾಯಾನುದಾನ ಬಿಡುಗಡೆ ಮಾಡಿದ ದಿನಾಂಕದಿಂದ ನಿಗಧಿಪಡಿಸಬೇಕಾಗಿರುತ್ತದೆ ಎಂದು ಅನುದಾನರಹಿತ ಸೇವಾ ಅವಧಿಯನ್ನು ನಿವೃತ್ತಿ ವೇತನ ಒಳಗೊಂಡಂತೆ ಯಾವುದೇ ವೇತನ ನಿಗಧಿ, ವೇತನ ಬಡ್ತಿ, ಜೇಷ್ಠತೆ ಮತ್ತು ಇತರೆ ಸೇವಾ ಸೌಲಭ್ಯಗಳನ್ನು ಪರಿಗಣಿಸಬಾರದೆಂದು ಆದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖ (2) ಮತ್ತು (3) ರ ಈ ಕಛೇರಿ ಸುತ್ತೋಲೆಗಳಲ್ಲಿ ರಾಜ್ಯದ ಎಲ್ಲಾ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ತಮ್ಮ ಸಂಸ್ಥೆಯ ಸಿಬ್ಬಂದಿ ವರ್ಗದವರ ಸೇವಾ ಪುಸ್ತಕಗಳನ್ನು ಪರಿಶೀಲಿಸಿ, ಮೇಲೆ ತಿಳಿಸಿರುವಂತಹ ಪ್ರಕರಣಗಳು ಇದ್ದಲ್ಲಿ, ವೇತನವನ್ನು ಪುನರ್ ನಿಗಧಿಗೊಳಸಿ ವೇತನ ಬಿಲ್ಲುಗಳನ್ನು ಸಲ್ಲಿಸಲು ಈಗಾಗಲೇ ತಿಳಸಲಾಗಿದ್ದರೂ ಸಹ ಯಾವು ಕ್ರಮವಹಿಸದೇ ಇರುವುದು ಕಂಡು ಬಂದಿರುತ್ತಾರೆ.

ವೇತನ ನಿಯಂತ್ರಣ ಕಾಯ್ದೆಯಂತೆ ಎಲ್ಲಾ ಬೋಧಕರು / ಬೋಧಕೇತರ ಸಿಬ್ಬಂದಿಗಳ ವೇತನವನ್ನು ಮರು ನಿಗಧಿಗೊಳಸುವುದು ಪ್ರಾಂಶುಪಾಲರ ಜವಬ್ದಾರಿಯಾಗಿರುತ್ತದೆ. ಆದುದರಿಂದ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ ಎಲ್ಲಾ ಬೋಧಕರು / ಬೋಧಕೇತರ ಸಿಬ್ಬಂದಿಗಳ ವೇತನವನ್ನು ಮರು ನಿಗಧಿಗೊಳಸಿ, ಸೇವಾ ಪುಸ್ತಕದ Extract ನೊಂದಿಗೆ ನಿರ್ದೇಶನಾಲಯದ ಇಎಸ್‌ಟಿ(4) ಮತ್ತು ಲೆಕ್ಕಾಧಿಕಾರಿಗಳಗೆ ದಿನಾಂಕ 20-04-2019 ರೊಳಗೆ ಪ್ರಸ್ತಾವನೆಯನ್ನು ಸಲ್ಲಿಸಲು ಎಲ್ಲಾ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ ಈ ಮೂಲಕ ಸೂಚಿಸಲಾಗಿದೆ. ವೇತನವನ್ನು ಮರು ನಿಗಧಿಗೊಳಸಿದ ಸಿಬ್ಬಂದಿಗಳಗೆ ಮಾತ್ರ 2019-20 ನೇ ಸಾಲಿನಿಂದ ವೇತನವನ್ನು ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ವೇತನ ನಿಯಂತ್ರಣ ಕಾಯ್ದೆಯಂತೆ ವೇತನವನ್ನು ಮರುನಿಗದಿಗೊಳಿಸದಿರುವ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಸಂಸ್ಥೆಯ ವಿರುದ್ಧ ನಿಯಮಾನುಸಾರ ಕ್ರಮವಹಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು.

ನಿರ್ದೇಶಕರು.
**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**
**ಬೆಂಗಳೂರು.**

ಇವರಿಗೆ:

1. ಎಲ್ಲಾ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ
2. ಲೆಕ್ಕಾಧಿಕಾರಿಗಳು, ನಿರ್ದೇಶನಾಲಯ, ಬೆಂಗಳೂರು
3. ಇಎಸ್‌ಟಿ (4)ಬಿ ವಿಭಾಗ, ನಿರ್ದೇಶನಾಲಯ, ಬೆಂಗಳೂರು